ತರೀಕೆರೆ ತಾಲ್ಲೂಕಿನಲ್ಲಿ ಪೂರ್ವ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳ ಮಂಜೂರಾತಿ

೯೮ (೧೩) ಶ್ರೀ ಹೆಚ್. ಆರ್. ರಾಜು (ತರೀಕೆರೆ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತರೀಕೆರೆ ತಾಲ್ಲೂಕಿನ ಪ್ರಸಕ್ತ ಸಾಲಿನಲ್ಲಿ ಮಂಜೂರಾತಿ ನೀಡಿರುವ ಪೂರ್ವ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು, ಹಾಗಿದ್ದಲ್ಲಿ ಯಾವ ಸ್ಥಳಗಳಿಗೆ ಮಂಜೂರಾತಿ ನೀಡಲಾಗಿದೆ?

ಆ) ತರೀಕೆರೆ ತಾಲ್ಲೂಕಿನಲ್ಲಿ ಮೇಲ್ಕಂಡ ಶಾಲೆಗಳಿಗೆ ಮಂಜೂರಾತಿಗಾಗಿ ಹೊಸದಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು, ಆ ಬಗ್ಗೆ ವಿವರಗಳನ್ನೊದಗಿಸುವುದು?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ)

	ಸರ್ಕಾರಿ	ಸರ್ಕಾರೇತರ
ಪೂರ್ವ ಪ್ರಾಥಮಿಕ ಶಾಲೆ	ಇಲ್ಲ	೧) ಕೆ. ಚಟ್ನಹಳ್ಳಿ (೨)
ಮಾಧ್ಯಮಿಕ ಶಾಲೆ	೧) ಶಾಂತವೇರಿ ೨) ಕಂಬನವೀದಿ ೩) ಮುಗಳಿ ೪) ನಾಗೇನಹಳ್ಳಿ ೫) ಮಕ್ಕಂಬೊದಿ ೬) ಕರಗದಹಳ್ಳಿ	ಇಲ್ಲ
ಪ್ರೌಢಶಾಲೆ	ಇಲ್ಲ	ಇಲ್ಲ

ಆ)

	ಸರ್ಕಾರಿ	ಸರ್ಕಾರೇತರ
ಪೂರ್ವ ಪ್ರಾಥಮಿಕ ಶಾಲೆ	ಇಲ್ಲ	೨
ಮಾಧ್ಯಮಿಕ	೬	ಇಲ್ಲ
ಪ್ರೌಢಶಾಲೆ	ಇಲ್ಲ	೮

ಡಾ।। ಹೆಚ್. ಆರ್. ರಾಜು.— ಸ್ವಾಮಿ, ನಮ್ಮ ಕ್ಷೇತ್ರಕ್ಕೆ ಈ ಸಾರಿ ೩–೪ ಪ್ರೌಢಶಾಲೆಗಳನ್ನು ಮಂಜೂರು ಮಾಡಿಕೊಡಬೇಕೆಂದು ನಾವು ಪತ್ರವನ್ನು ಬರೆದಿದ್ದೇವೆ. ಆದರೆ ಸರ್ಕಾರದ ವತಿಯಿಂದಾಗಲೀ, ಅಥವಾ ಖಾಸಗಿಯವರಿಂದಾಗಲೀ ಪ್ರೌಢಶಾಲೆಗಳನ್ನು ತೆರೆಯಲು ತಾವು ಅವಕಾಶವನ್ನು ಮಾಡಿಕೊಟ್ಟಿಲ್ಲ. ಆದ್ದರಿಂದ ಈಗ ದಯವಿಟ್ಟು ಶಿವನಿ ಹೋಬಳಿಯಲ್ಲಿ ಒಂದು ಹೆಣ್ಣುಮಕ್ಕಳ ಪ್ರೌಢಶಾಲೆಯನ್ನು ತೆರೆಯಲು ಅನುಮತಿ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—ಎಷ್ಟು ಮಾಧ್ಯಮಿಕ ಶಾಲೆಗಳು ಅದರ ಸುತ್ತಮುತ್ತಲಿವೆ ಎಂಬುದನ್ನು ನೋಡಿ ಮಾಡೋಣ.

ಡಾ।। ಹೆಚ್. ಆರ್. ರಾಜು.— ಸ್ವಾಮಿ, ಅಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಅಲ್ಲಿ ಒಂದು ಹೆಣ್ಣುಮಕ್ಕಳ ಪ್ರೌಢಶಾಲೆಯ ಅವಶ್ಯಕತೆ ಇದೆ, ದಯವಿಟ್ಟು ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.— ಆ ಹೋಬಳಿಯ ಸುತ್ತಮುತ್ತ ಹತ್ತಿರದಲ್ಲಿ ಎಲ್ಲೂ ಪ್ರೌಢಶಾಲೆಗಳು ಇಲ್ಲದಿದ್ದರೆ ಮಂಜೂರು ಮಾಡಲು ಪರಿಶೀಲಿಸುತ್ತೇನೆ.